ಇಲ್ಲ್ ನೋಡ" ಎಂದ. "ಅಲ್ಲ ಪಕ್ಕೀರ, ರಂಡಿಮುಂಡಿ ಹೆಣ್ಣಮಗಳ ನಾ. ಹಿರ್ಯಾ ಹ್ವಾದ ಮ್ಯಾಲೆ ಅದೆಂಥಾ ನಸೀಬ್ ತೆರಿದೀತು? ನಂದು ಖೊಟ್ಟಿ ನಸೀಬ" ಎನ್ನುತ್ತ ಸಗಣಿಯ ಒಂದು ಗುಂಡನ್ನು ತೆಗೆದುಕೊಂಡು ಕುಳ್ಳು ಬಡಿಯತೊಡಗಿದಳು. "ಇಷ್ಟ್ ದಿನಾ ಖೊಟ್ಟಿ ಇದ್ದಿರಬಹುದಬೇ. ಇನ್ ಮ್ಯಾಲೆ ನಿನ್ನ ಪಡಿಪಾಟಲ ಎಲ್ಲಾ ದೂರಾತ ಅಂತ ತಿಳಕೋ" ಎಂದು ಪಕ್ಕೀರ್ ಹೇಳುತ್ತಿದ್ದಂತೆಯೇ ಸಾವಕ್ಕನ ಸಿಟ್ಟು ನೆತ್ತಿಗೇರಿತ್ತು. "ಅದೇನ್ ಅಂತ್ ಹೇಳಲಾ. ಆವಾಗಿಂದ್ ನೋಡಾಕತ್ತೇನಿ. ನಸೀಬ ತೆರೀತ್, ನಸೀಬ್ ತೆರೀತ್ ಅಂತ್ ಬಾಯಿಪಟ್ ಮಾಡಾಕತ್ತೀ" ಎಂದು ಸಿಡಿಮಿಡಿಗೊಂಡಾಗ, "ಚಿಗವ್ವಾ ನಿನ್ ಮನೀಗೆ ಮಂತ್ರಿಗೋಳ್ ಬರತಾರ್ ಅಂತಬೇ. ಒಂದ್ ರಾತ್ರಿ ನಿನ್ನ ಮನ್ಯಾಗ್ ವಸ್ತಿ ಇದ್ದ್ ಹೊಕ್ಕಾರಂತ" ಎಂದು ಪಕ್ಕೀರ ಹೇಳುತ್ತಿದ್ದಂತೆಯೇ ತಾಳ್ಮೆ ಕಳೆದುಕೊಂಡ ಸಾವಕ್ಕ ಸಗಣಿಗೈಯಿಂದಲೇ ಪಕ್ಕೀರನ ಬೆನ್ನಿಗೊಂದು ಗುದ್ದಿ, "ಮೂಳಾ ಹಳೇ ಮೂಳಾ ಮತ್ಯಾರದರಾ ಕೂಡ ನಕಲಿ ಮಾಡ. ನನ್ನ ಗುಟಾ ಮಾಡಾಕ್ ಹೋಗಬ್ಯಾಡಾ. ಸಿಟ್ ಬಂದರ ನಾ ಮನಶ್ಯಾಳಾ ಅಲ್ಲ ಮತ್ತ್" ಎನ್ನುತ್ತಿದ್ದಂತೆಯೇ ಪಕ್ಕೀರನೂ ತಾಳ್ಮೆ ಕಳೆದುಕೊಂಡ. "ನೋಡಬೇ ಚಿಗವ್ವಾ ನಾ ಖರೇವಂದರೂ ಹೇಳಾಕತ್ತೇನಿ. ಹಳ್ಳೀ ಮಂದೀ ಸುಖ ದುಃಖಾ ತಿಳಕೊಳಾಕ ಮಂತ್ರಿಗೋಳು ನಮ್ಮ ಹಳ್ಳಿ ಆರಸಗೊಂಡಾರಂತ. ಅದರಾಗ ನೀ ಬಡವಿ ಅಂತ್ ನಿನ್ನ ಮನೀನ ನಮ್ಮೂರ್ ಪಂಚಾಯ್ತಿಯವರು ಆರಸ್ಯಾರ ಅಂತ. ನಿಂದ್ ಏನರಾ ಸಮಸ್ಯೆ ಇತ್ತು ಅಂದರ ಮಂತ್ರಿಗೋಳ್ ಕುಟಾ ಹೇಳಕೋಬೌದು. ನಮ್ಮೂರಿನ ಎಲ್ಲಾ ಮಂದೀನೂ ಬೆಂಗಳೂರ ತನಾ ಹೋಗಾಕ ಆಗೂದುಲ್ಲ್ ಅಂತ್ ಹೇಳಿ ಅವರs ಇಲ್ಲಿ ಬರತಾರ ಅಂತ್. ತಿಂಗಳಾ ಒಂದೊಂದ್ ಹಳ್ಳೀಗಿ ಹೋಗಿ ಅಲ್ಲಿ ಒಬ್ಬರ ಮನ್ಯಾಗ ವಸ್ತಿ ಮಾಡಿ ಅವರವರ ತೊಂದರಿ ಏನಂತ್ ತಿಳಕೊಂಡ್ ಬಗೀಹರಸತಾರ ಅಂತಬೇ. ನಂಬಿದರ ನಂಬು ಬಿಟ್ಟರ ಬಿಡು. ನನಗ ಮೈತುಂಬ ಕೆಲಸ ಐತಿ" ಎಂದವನೇ ನಡೆದು ಬಿಟ್ಟ ಪಕ್ಕೀರ. ಸಾವಕ್ಕನ ತಲೆಗೆ ಪಕ್ಕೀರ ಬಿಟ್ಟ ಹುಳದಿಂದ ಆಕೆಯ ತಲೆ ಗುಂಯ್ ಎನ್ನತೊಡಗಿತು. ತನ್ನದೇ ಸಮಸ್ಯೆಗಳ ಸರಮಾಲೆಯಲ್ಲಿ ಬಂದಿಯಾಗಿದ್ದ ಸಾವಕ್ಕನಿಗೆ ಹೊಸದೊಂದು ಸಮಸ್ಯೆ ಸೇರ್ಪಡೆಯಾಗಿತ್ತು.

ಮಂತ್ರಿಗಳು ತನ್ನ ಮನೆಯಲ್ಲಿ ಒಂದು ರಾತ್ರಿ ವಸ್ತಿ ಮಾಡುತ್ತಿರುವುದು ನಿಕ್ಕಿ ಎಂದು ತಿಳಿಯುತ್ತಲೇ ಸಾವಕ್ಕನ ಹೊಟ್ಟೆ ಗುದಮುರಗಿ ಹಾಕತೊಡಗಿತ್ತು. ಕುಳಿತರೂ ನಿಂತರೂ ಮಲಗಿದರೂ ಜೀವಕ್ಕೆ ಸಮಾಧಾನವಿಲ್ಲದಂತಾಗಿತ್ತು. ಎಷ್ಟೋ ಹಿರೀಕರನ್ನು ಕಂಡ ಈ ಮನೆ ಹಳತಾರಕ್ಕೆ ಬಿದ್ದು ಲಿಕಿ ಲಿಕಿ ಎನ್ನುವಂತಾಗಿತ್ತು. ಮಳೆ ಬಂದರೆ ಸಾಣಿಗೆಯಂತಾಗುತ್ತಿತ್ತು. ಬಿರುಸಾಗಿ ಗಾಳಿ ಬೀಸಿದರೆ ಹೊದೆಸಿದ್ದ ಹಂಚುಗಳು ಹಾರಿ ಪಕ್ಕದ ಮನೆಯ ಮೇಲೆ ಬೀಳುತ್ತಿದ್ದವು. ಗೋಡೆ ಚಕ್ಕಳೆದ್ದು ಉದುರುತ್ತಿತ್ತು. ಮೂರು ಅಂಕಣದ ಮನೆಯಲ್ಲಿ ಒಂದು ಅಂಕಣ ಕುಳಿತುಕೊಳ್ಳಲು, ಮತ್ತೊಂದು ಮಲಗಲು, ಇನ್ನೊಂದು ಕತ್ತಲು ತುಂಬಿದ ಸಣ್ಣ ಅಡಿಗೆ ಮನೆ. ಬೆಳಗಾದರೆ ಚರಿಗೆ ಹಿಡಿದು ಕೆರೆ ಅಂಗಳಕ್ಕೆ ಹೋಗಬೇಕು. ಇಂತಹ ತನ್ನ ಅರಮನೆಯಲ್ಲಿ ಮಂತ್ರಿಗಳಿಗೆ ವಸ್ತಿ ಮಾಡಲು ಬರುವ ಸಡಗರ ಏನಿತ್ತೋ? ದೊಡ್ಡ ಶಹರದಲ್ಲಿ ಇರುವ ಮಂತ್ರಿಗಳಿಗೆ ನನ್ನ ಮನೆಯೇ ಆಗಬೇಕೆಂದು ದೇವರೇನಾದರೂ ಕನಸಿಗೆ ಬಂದು ಅಪ್ಪಣೆ ಮಾಡಿತೋ ಏನೋ ಎಂದು ಸಾವಕ್ಕನ ತಲೆಯಲ್ಲಿ ಕಗ್ಗಂಟುಗಳು ಬೀಳ ತೊಡಗಿದ್ದವು. ಪಂಚಾಯ್ತಿಯವರೇ ತನ್ನ ಮನೆಯನ್ನು ಆರಿಸಿದ್ದು ಎಂದು ಪಕ್ಕೀರ ಹೇಳುತ್ತಿದ್ದ. 'ಅದೇನ್ ತುಪ್ಪಾ ಸುರ್ಯಾಕತ್ತತಿ ಅಂತ್ ನನ್ನ ಮನಿ ಮ್ಯಾಲೆ ಇವರ ನೆದರ ಬಿತ್ತೋ ಏನೋ ಮೂಳಗೋಳಿಗೆ. ದಿನಾ ಕುಳ್ ಬಡದ ಬಂಗಾರದಂಗ್ ಬದಕ ಮಾಡಾಕತ್ತಿದ್ನ. ಒಪ್ಪತ್ತ ಉಂಡರೂ ಹರಾ ಶಿವಾ ಅಂತಿದ್ದೆ. ಇದೇನ್ ಬಂತೋ ಯಪ್ಪಾ ನನಗ' ಎಂದು ದಿನವೂ ನವೆಯ ಹತ್ತಿದಳು ಸಾವಕ್ಕಾ. 'ಹಾಸಾಕ್ ಒಂದ್, ಹೊತಗೋಳಾಕ ಒಂದ್ ಹರಕ ಕೌದಿ ಇಟಗೊಂಡ್ ದಿನಾ ದೂಡಾಕತ್ತೇನಿ. ಈ ಮಂತ್ರಿ ವಸ್ತೀಗಿ ಬಂದರ ಕೊಟ್ಟೇನಿ ಅಂದರ ಮತ್ತೊಂದ್ ಪಡಾಳೀನೂ ಇಲ್ಲ.